# ಅಂಬೇಡ್ಕರ್ ಬಗೆಗಿನ ಡಿಎಸ್‌ಎಸ್ ತಿಳಿವಳಿಕೆ ಸೀಮಿತವಾದುದು, ಸಮಗ್ರವಾದುದಲ್ಲ...



ವಲೇರಿಯನ್ ರೊಡ್ರಿಗಸ್ ಅವರು ಕರ್ನಾಟಕ ಮೂಲದ ರಾಜಕೀಯ ವಿಜ್ಞಾನಿ. ನಾಲ್ಕು ದಶಕಗಳ ಕಾಲ ಅಂಬೇಡ್ಕರ್ ಅಧ್ಯಯನದಲ್ಲಿ ತೊಡಗಿಸಿಕೊಂಡು, ತಮ್ಮ ಆಳವಾದ ಪಾಂಡಿತ್ಯದ ಮೂಲಕ ಆಧುನಿಕ ಭಾರತೀಯ ರಾಜಕೀಯ ಚಿಂತನೆಗೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ. ಸ್ಥೂಲವಾಗಿ ಅವರ ಅಧ್ಯಯನವು ಭಾರತದಲ್ಲಿ ಸಾಂವಿಧಾನಿಕತೆ, ಸಂಸದೀಯ ಪ್ರಜಾಪ್ರಭುತ್ವ ಮತ್ತು ಆಧುನಿಕ ಭಾರತದಲ್ಲಿ ರಾಜಕೀಯ ಚಿಂತನೆ ವಿಷಯಗಳನ್ನು ಕೇಂದ್ರೀಕರಿಸಿದ್ದು, ಆಡಳಿತ ಮತ್ತು ಸಾಮಾಜಿಕ ನ್ಯಾಯದ ಕುರಿತು ಪ್ರಮುಖ ಚರ್ಚೆಗಳನ್ನು ರೂಪಿಸುತ್ತದೆ. ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ರಾಜಕೀಯ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿದ್ದ ರೊಡ್ರಿಗಸ್; ಅದಕ್ಕೂ ಮುಂಚೆ ಕರ್ನಾಟಕದ ಮಂಗಳೂರು ವಿಶ್ವವಿದ್ಯಾಲಯದಲ್ಲಿ ರಾಜಕೀಯ ವಿಜ್ಞಾನ ಬೋಧಿಸಿದ್ದರು. ಇತ್ತೀಚಿನ ವರ್ಷಗಳಲ್ಲಿ ಅವರು 'ಭಾರತೀಯ ಸಮಾಜ ವಿಜ್ಞಾನ ಸಂಶೋಧನಾ ಮಂಡಳಿ' (ICSSR) ರಾಷ್ಟ್ರೀಯ ಫೆಲೋ ಆಗಿ ಹಾಗೂ ಕೆನಡಾದ ವ್ಯಾಂಕೋವರ್‌ನಲ್ಲಿರುವ ಸೈಮನ್ ಫ್ರೇಸರ್ ವಿಶ್ವವಿದ್ಯಾಲಯದಲ್ಲಿ ಮಾನವಿಕ ವಿಭಾಗದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ದೆಹಲಿಯ ಅಂಬೇಡ್ಕರ್ ವಿಶ್ವವಿದ್ಯಾಲಯದ ಅಂಬೇಡ್ಕರ್ ಪೀಠದಲ್ಲೂ ಕಾರ್ಯ ನಿರ್ವಹಿಸಿದ್ದಾರೆ. ಅವರ ಸಂಪಾದಕೀಯ ಕಾರ್ಯದಲ್ಲಿ ಅಂಬೇಡ್ಕರ್‌ರವರ ಪ್ರಮುಖ ಬರಹಗಳು ಸೇರಿದ್ದು, ಅಂಬೇಡ್ಕರ್‌ರವರ ರಾಜಕೀಯ ಚಿಂತನೆಯ ಕುರಿತು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿದ್ವತ್ಪೂರ್ಣ ಮತ್ತು ಸಾರ್ವಜನಿಕ ಸಂವಾದವನ್ನು ರೂಪಿಸುವಲ್ಲಿ ಪ್ರಭಾವಶಾಲಿಯಾಗಿದೆ. ಅವರ ಇತ್ತೀಚಿನ ಪುಸ್ತಕ, 'ಅಂಬೇಡ್ಕರ್ಸ್ ಪೊಲಿಟಿಕಲ್ ಫಿಲಾಸಫಿ: ಎ ಗ್ರಾಮರ್ ಆಫ್ ಪಬ್ಲಿಕ್ ಲೈಫ್ ಫ್ರಮ್ ದಿ ಸೋಶಿಯಲ್ ಮಾರ್ಜಿನ್ಸ್' ಭಾರತದಲ್ಲಿನ ಜಾತಿ, ಜನಾಳ್ವಿಕೆ ಮತ್ತು ರಾಜಕೀಯ ಸಿದ್ಧಾಂತದೊಂದಿಗಿನ ಅವರ ವಿಮರ್ಶಾತ್ಮಕ ತೊಡಗಿಸಿಕೊಳ್ಳುವಿಕೆಯನ್ನು ಮತ್ತಷ್ಟು ವಿಸ್ತರಿಸುತ್ತದೆ. ವಲೇರಿಯನ್ ರೊಡ್ರಿಗಸ್ ಅವರೊಂದಿಗೆ ವಿಮರ್ಶಕ ಶಶಿಕುಮಾರ್ ಅವರು 'ಮಯೂರ'ಕ್ಕೆಂದು ಇ–ಮೇಲ್ ಮೂಲಕ ನಡೆಸಿರುವ ಸಂದರ್ಶನ ಇಲ್ಲಿದೆ.